

## ಎತ್ತರಕ್ಕೆ ಮಿತಿಯಿಲ್ಲ..

ಸುಮಾರು 13 ಅಡಿಯಷ್ಟು ಬೆಳೆದಿರುವ ಮನಿ ಪ್ಲ್ಯಾಂಟ್. ಯಾವ ಗೊಬ್ಬರದ ಆರೈಕೆಯಿಲ್ಲದೇ ಮಣ್ಣು ಹಾಗೂ ನೀರನ್ನು ಬಳಸಿಕೊಂಡು ನಮ್ಮ ಮನೆಯ ಗೋಡೆಯ ಆಸರೆ ಪಡೆದು ಬೆಳೆದು ನಿಂತಿದೆ.

**–ವಿಜಯಾ ನಂಜುಂಡಯ್ಯ, ಬೆಂಗಳೂರು**

## ಅರೆತಿಪ್ಪೂರಿನ ಗೊಮ್ಮಟ

ಮಂಡ್ಯ ಜಿಲ್ಲೆಯ ಮದ್ದೂರಿನಿಂದ 16 ಕಿ.ಮೀ ದೂರದಲ್ಲಿರುವ ಅರೆತಿಪ್ಪೂರಿನ ಸವಣಪ್ಪನ ಬೆಟ್ಟದ ಮೇಲೆ ಹನ್ನೆರಡು ಅಡಿ ಎತ್ತರದ ಭವ್ಯವಾದ ಬಾಹುಬಲಿಯ ಮೂರ್ತಿ ಇದೆ. ಅರೆತಿಪ್ಪೂರಿನ ಈ ಮೂರ್ತಿಯು ಕ್ರಿ.ಶ. 918ರಲ್ಲಿ ನಿರ್ಮಾಣಗೊಂಡಿದೆ. ಇದು ಗಂಗರ ಕಾಲದ್ದಾಗಿದೆ.

ಇಲ್ಲಿ ಕನಕಗಿರಿ, ಸವಣಪ್ಪನ ಗುಡ್ಡ ಎಂಬ ಎರಡು ಬೆಟ್ಟಗಳಿವೆ. ಇದನ್ನು ಕೂಳಗೆರೆ ಶಾಸನದಲ್ಲಿ ಕನಕಗಿರಿ ತೀರ್ಥ ಎಂದು ಕರೆಯಲಾಗಿದೆ. 1200 ವರ್ಷಗಳ ಹಿಂದೆ ಚೋಳ, ಗಂಗರು ಹಾಗೂ ಹೊಯ್ಸಳರ ವಂಶದ ಆಡಳಿತವನ್ನು ಈ ಶಿಲಾಶಾಸನಗಳು ತಿಳಿಸುತ್ತವೆ.

**– ತೈರೊಳ್ಳಿ ಮಂಜುನಾಥ ಉಡುಪ, ಮಂಡ್ಯ**





## ಶತಮಾನ ಕಂಡ ಅಜ್ಜಿ

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ನಾಲತವಾಡ ಗ್ರಾಮದಲ್ಲಿ ಶತಮಾನದ ಗಡಿ ದಾಟಿದ ಎಲ್ಲರ ಪ್ರೀತಿಯ ಅಜ್ಜಿಯೊಬ್ಬರಿದ್ದಾರೆ. ಇವರೇ ಶಿವಲಿಂಗಮ್ಮ ರಾಚಪ್ಪ ಹಾವರಗಿ. ಈಗಲೂ ಬೆಳಿಗ್ಗೆ ಐದು ಗಂಟೆಗೆ ಎದ್ದು ನೀರೊಲೆ ಹಾಕಿ, ಅಂಗಳ ಕಸ ಹೊಡೆದು, ನೀರು ಚಿಮುಕಿಸಿ ಚೆಂದದ ರಂಗವಲ್ಲಿ ಹಾಕುತ್ತಾರೆ. ಈಗಲೂ ಯಾರ ಸಹಾಯ ಇಲ್ಲದೇ ತಮ್ಮ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಊರುಗೋಲು ಇಲ್ಲದೆ ಸರಸರನೆ ಲವಲವಿಕೆಯಿಂದ ಹೆಜ್ಜೆ ಹಾಕುತ್ತಿದ್ದರೆ ಎಲ್ಲರೂ ಬೆರಗುಗಣ್ಣಿನಿಂದ ನೋಡುತ್ತಾರೆ. ಈಗಲೂ ಇವರು ಕಡಲೆ ಕಾಳುಗಳನ್ನು ಅಗಿಯುತ್ತಾರೆ ಅಂದ್ರೆ ನೀವೇ ಊಹಿಸಿ ಈ ಅಜ್ಜಿಯ ಹಲ್ಲುಗಳು ಎಷ್ಟು ಗಟ್ಟಿಮುಟ್ಟಿಯಾಗಿವೆ ಎಂದು. ಈ ಹಿರಿಯ ಅಜ್ಜಿ ನೂರಾರು ಸೋಬಾನ ಪದಗಳನ್ನು ಮೈಮರೆತು ಹಾಡುತ್ತಾರೆ.

ಸದ್ಯ ನೂರಾ ನಾಲ್ಕಕ್ಕೆ ಪಾದಾರ್ಪಣೆ ಮಾಡಿದ ಈ ಅಜ್ಜಿಯ ಆರೋಗ್ಯ, ಆಯುಷ್ಯದ ಗುಟ್ಟು ಏನೆಂದು ಕೇಳಿದರೆ 'ನೋಡವ್ವಾ... ಮನಸ್ಸನಾಗ ಕಸಾ ತುಂಬ್ಕೋಬಾರ್ದು ನೋಡು. ಇಷ್ಟ ಮಾಡದ್ರ ನೂರು ವರ್ಷ ಯಾಕ ಅದಕ್ಕಿಂತ ಹೆಚ್ಚು ವರ್ಷ ಬದಕ್ತಾರ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ. ಎಂಟು ಮಕ್ಕಳು, 38 ಮೊಮ್ಮಕ್ಕಳು ಹಾಗೂ 28 ಮರಿಮೊಮ್ಮಕ್ಕಳನ್ನು ಎತ್ತಿ ಆಡಿಸಿದ ಹಿರಿಯ ಜೀವಿಗೆ ಗಿರಿಮೊಮ್ಮಕ್ಕಳನ್ನು ಕಣ್ತುಂಬ ನೋಡುವ ಬಯಕೆ.

**– ಚಂದ್ರಕಾಂತ ಮ. ತಾಳಿಕೋಟಿ, ಬಾದಾಮಿ**